ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ವಿದ್ಯುತ್ ಉತ್ಪಾದನೆ ಪ್ರಮಾಣ ದರ ನಿಗಧಿ ಮತ್ತು ರಾಜ್ಯಕ್ಕೆ ಆದಾಯ ಸ್ವೀಕಾರದ ಬಗ್ಗೆ

ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನ ಸಭೆಯಿಂದ ಚುನಾಯಿತರಾದವರು) –

422 (567) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಉತ್ಪಾದನೆ ಮಾಡುತ್ತಿರುವ ಒಟ್ಟು ವಿದ್ಯುತ್ ಉತ್ಪಾದನೆ ಎಷ್ಟು;

(ಆ) ನವೀಕರಿಸಬಹುದಾದ ವಿವಿಧ ಮೂಲ ಇಂಧನಗಳಾದ ಪವನ ವಿದ್ಯುತ್ ಯೋಜನೆ, ಸೌರ ವಿದ್ಯುತ್ ಯೋಜನೆ, ಜಲ ವಿದ್ಯುತ್ ಯೋಜನೆಗಳು ರಾಜ್ಯದ ಯಾವ ಯಾವ ಭಾಗಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿದೆ;

(ಇ) ಈ ಯೋಜನೆಗಳಿಂದ ಎಷ್ಟು ಪ್ರಮಾಣ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಉತ್ಪಾದನೆಯಾದ ವಿದ್ಯುತ್ಶಕ್ತಿಯನ್ನು ಯಾವ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ; ಕಳೆದ 3 ವರ್ಷಗಳಿಂದ ಈ ಉತ್ಪಾದನೆಯಿಂದ ಸರ್ಕಾರಕ್ಕೆ ಎಷ್ಟು ಪ್ರಮಾಣದ ಆದಾಯ ಬಂದಿದೆ? (ಸಂಪೂರ್ಣ ವಿವರ ನೀಡುವುದು)